## ನಿಮ್ಮೊಡನೆ

# ಸಿನಿಮಾ ಮಂದಿರಗಳಲ್ಲಿ ರಾಷ್ಟ್ರಗೀತೆ

‘ಸುಪ್ರೀಂಕೋರ್ಟ್ ತೀರ್ಪು ನೀಡಿದ ಮೇಲೆ ಮುಗೀತು’ ಎನ್ನುವುದು ಹಳೆಯ ಮಾತು. ಈಗ ಸುಪ್ರೀಂಕೋರ್ಟಿನ ತೀರ್ಪಿನ ಬಗ್ಗೆಯೂ ವ್ಯಾಪಕ ಚರ್ಚೆ ನಡೆಯುತ್ತದೆ. ಜನಸಾಮಾನ್ಯರ ಬದುಕಿನ ಮೇಲೆ ನೇರ ಪರಿಣಾಮ ಬೀರುವ ಕೆಲವು ತೀರ್ಪುಗಳಂತೂ ಹೊಸ ವಿವಾದಗಳನ್ನು ಹುಟ್ಟು ಹಾಕುತ್ತವೆ. ಕಳೆದ ವಾರ ಸುಪ್ರೀಂಕೋರ್ಟ್ ನೀಡಿದ ತೀರ್ಪೊಂದು ಈಗ ಚರ್ಚೆ ಹುಟ್ಟುಹಾಕಿದೆ. ‘ರಾಷ್ಟ್ರದಾದ್ಯಂತ ಎಲ್ಲ ಚಿತ್ರಮಂದಿರಗಳಲ್ಲಿ ಸಿನಿಮಾ ಪ್ರದರ್ಶನಕ್ಕೆ ಮೊದಲು ರಾಷ್ಟ್ರಗೀತೆ ಪ್ರಸಾರ ಮಾಡಬೇಕು. ಈ ಸಂದರ್ಭದಲ್ಲಿ ಚಿತ್ರಪರದೆಯ ಮೇಲೆ ರಾಷ್ಟ್ರಧ್ವಜ ಪ್ರದರ್ಶಿಸಬೇಕು. ಜನರು ಗೌರವಪೂರ್ವಕವಾಗಿ ಎದ್ದು ನಿಲ್ಲಬೇಕು’ ಎಂದು ಸುಪ್ರೀಂಕೋರ್ಟ್ ಪ್ರಕರಣವೊಂದರಲ್ಲಿ ಮಧ್ಯಂತರ ಆದೇಶ ಹೊರಡಿಸಿದೆ. ‘ಮೊದಲು ನಾವು ಭಾರತೀಯರು, ವ್ಯಕ್ತಿಸ್ವಾತಂತ್ರ್ಯ ಎನ್ನುವುದು ಬಳಿಕದ್ದು. ಇದನ್ನು ಎಲ್ಲ ನಾಗರಿಕರೂ ಅರ್ಥ ಮಾಡಿಕೊಳ್ಳಬೇಕು’ ಎಂದೂ ಸುಪ್ರೀಂಕೋರ್ಟ್ ಹೇಳಿದೆ.

ಸುಪ್ರೀಂಕೋರ್ಟಿನ ಉದ್ದೇಶ ಒಳ್ಳೆಯದೇ. ಆದರೆ ಈ ತೀರ್ಪು ಕಾರ್ಯಸಾಧುವಾದದ್ದೇ? ‘ಈ ತೀರ್ಪನ್ನು ಪ್ರಾಯೋಗಿಕವಾಗಿ ಅನುಸರಿಸಲು ಸಾಧ್ಯವಿಲ್ಲ; ಸುಪ್ರೀಂಕೋರ್ಟ್ ಈ ತೀರ್ಪು ನೀಡಿದ್ದು ಸರಿಯಲ್ಲ’ ಎನ್ನುವವರು ಎರಡು ಕಾರಣಗಳನ್ನು ಮುಂದಿಡುತ್ತಿದ್ದಾರೆ. ಅದರಲ್ಲಿ ಮೊದಲನೆಯದ್ದು ತಾಂತ್ರಿಕ ಕಾರಣ. ‘ಕಾನೂನುಗಳನ್ನು ಮಾಡುವುದು ಕಾರ್ಯಾಂಗದ ಕೆಲಸ, ನ್ಯಾಯಾಂಗದ್ದಲ್ಲ. ಕಾನೂನುಗಳ ವ್ಯಾಖ್ಯಾನ ಮಾಡುವುದು ಮಾತ್ರ ನ್ಯಾಯಾಂಗದ ಕೆಲಸ. ಸಿನಿಮಾ ಮಂದಿರಗಳಲ್ಲಿ ರಾಷ್ಟ್ರಗೀತೆ ಹಾಡಬೇಕೆಂದು ಆದೇಶ ಹೊರಡಿಸಿದ್ದು ಕಾರ್ಯಾಂಗದ ಕೆಲಸದಲ್ಲಿ ಹಸ್ತಕ್ಷೇಪ ಮಾಡಿದಂತೆ’ ಎನ್ನುವುದು ಮೊದಲ ಕಾರಣ.

ಎರಡನೆಯ ಕಾರಣ– ಈ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಇರುವ ತೊಂದರೆಗಳು. ಸಿನಿಮಾ ಮಂದಿರಕ್ಕೆ ಜನರು ಹೋಗುವುದು ಮನರಂಜನೆಗಾಗಿ. ಈಗ ಬರುತ್ತಿರುವ ಬಹುತೇಕ ಸಿನಿಮಾಗಳಂತೂ ಸಭ್ಯ ನಾಗರಿಕರು ಕುಟುಂಬ ಸಮೇತ ಕುಳಿತು ನೋಡಲು ಆಗದಿರುವಂತಿವೆ. ಅಂತಹ ಕಡೆ ರಾಷ್ಟ್ರಗೀತೆಯನ್ನು ಹಾಡುವ ಮೂಲಕ ಅದರ ಪಾವಿತ್ರ್ಯಕ್ಕೆ ಕುಂದುಂಟು ಮಾಡುವುದು ಸರಿಯಲ್ಲ. ಥಿಯೇಟರ್‌ನಲ್ಲಿ ರಾಷ್ಟ್ರಗೀತೆ ಹಾಡುವಾಗ ಯಾರಾದರೂ ಪ್ರೇಕ್ಷಕರು ಅಗೌರವ ಸಲ್ಲಿಸಿದರೆ ಅದನ್ನು ಗುರುತಿಸುವುದು ಹೇಗೆ? ಗುರುತಿಸುವವರು ಯಾರು? ಪ್ರತಿಯೊಂದು ಥಿಯೇಟರಿನಲ್ಲೂ ಶಾಶ್ವತವಾಗಿ ಪೊಲೀಸರನ್ನು ನೇಮಿಸಲಾಗುವುದೆ? ಯಾರಾದರೂ ಅಗೌರವ ತೋರಿದರೆ ಸಿನಿಮಾ ಥಿಯೇಟರ್ ಮಾಲೀಕರೂ ಹೊಣೆಯಾಗುವರೆ?

ಈ ಆದೇಶವನ್ನು ನೀಡುವಾಗ ಸುಪ್ರೀಂಕೋರ್ಟ್ ಸಂವಿಧಾನದ ಪರಿಚ್ಛೇದ 51 (A) (a) ಅನ್ನು ಉಲ್ಲೇಖಿಸಿದೆ. ‘ಸಂವಿಧಾನಕ್ಕೆ ಬದ್ಧವಾಗಿದ್ದು ದೇಶದ ಲಾಂಛನಗಳಾದ ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗೆ ಗೌರವ ಸಲ್ಲಿಸುವುದು ದೇಶದ ಪ್ರತಿಯೊಬ್ಬ ನಾಗರಿಕನ ಕರ್ತವ್ಯ’ ಎಂದು ಆ ಪರಿಚ್ಛೇದದಲ್ಲಿ ಇದೆ. ರಾಷ್ಟ್ರಗೀತೆಯನ್ನು ಎಲ್ಲರೂ ಗೌರವಿಸಬೇಕು, ರಾಷ್ಟ್ರಧ್ವಜಕ್ಕೂ ಅಗ್ರಗೌರವ ಸಲ್ಲಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜಕ್ಕೆ ಗೌರವ ನೀಡುವುದಕ್ಕೆ ಅದರದ್ದೇ ಆದ ಕ್ರಮಗಳೂ ಇರಬೇಕು ಎನ್ನುವುದನ್ನು ನಾವು ಮರೆಯಬಾರದು.

ಸಿನಿಮಾ ಮಂದಿರಗಳಲ್ಲಿ ರಾಷ್ಟ್ರಗೀತೆ ಹಾಡುವ ಪದ್ಧತಿ ಹಿಂದೆಯೂ ಇತ್ತು. 1962ರಲ್ಲಿ ಚೀನಾ – ಭಾರತ ಮಧ್ಯೆ ಯುದ್ಧದ ಹಿನ್ನೆಲೆಯಲ್ಲಿ, ಸಿನಿಮಾ ಮಂದಿರಗಳಲ್ಲಿ ಪ್ರದರ್ಶನ ಮುಗಿದ ಬಳಿಕ ರಾಷ್ಟ್ರಗೀತೆಯನ್ನು ಹಾಡುವ ಪದ್ಧತಿ ಜಾರಿಗೆ ಬಂದಿತ್ತು. ಹತ್ತು ವರ್ಷಗಳಿಗೂ ಹೆಚ್ಚು ಕಾಲ ಈ ಪದ್ಧತಿ ಮುಂದುವರಿದಿತ್ತು. ಈಗ ಕೆಲವೇ ಕೆಲವು ಚಿತ್ರಮಂದಿರಗಳಲ್ಲಿ ಮಾತ್ರ ಅದು ಉಳಿದುಕೊಂಡಿದೆ. ರಾಷ್ಟ್ರಗೀತೆ ನುಡಿಸುವಾಗ ಎಲ್ಲ ಪ್ರೇಕ್ಷಕರೂ ಎದ್ದು ನಿಲ್ಲುತ್ತಾರೆಂಬ ಗ್ಯಾರಂಟಿ ಆಗಲೂ ಇರಲಿಲ್ಲ. ಅರ್ಧಕ್ಕರ್ಧ ಜನರು ಸುಮ್ಮನೆ ಕುಳಿತಿರುತ್ತಿದ್ದರು. ಕೆಲವರು ಮಾತನಾಡುತ್ತಿದ್ದರು. ಬಹುಶಃ ಈ ರೀತಿಯ ಅಗೌರವದ ವಾತಾವರಣ ತಪ್ಪಿಸಲೆಂದೇ ರಾಷ್ಟ್ರಗೀತೆ ನುಡಿಸುವ ಪದ್ಧತಿ ನಿಂತುಹೋಗಿರಬೇಕು.

ಈಗ ಮತ್ತೆ ಆ ಪದ್ಧತಿಯನ್ನು ಶುರು ಮಾಡಿದರೆ ಸಾಕಷ್ಟು ಪ್ರಶ್ನೆಗಳು ಉದ್ಭವಿಸುತ್ತವೆ. ಕೋರ್ಟ್‌ಗಳಲ್ಲಿ ಏಕೆ ಹಾಡುವುದಿಲ್ಲ? ಸಿನಿಮಾದಂತೆ ಮನರಂಜನೆಯ ತಾಣವಾದ ನೈಟ್‌ಕ್ಲಬ್‌ಗಳಲ್ಲಿ ಏಕೆ ಹಾಡಬಾರದು? ಎಂದೆಲ್ಲ ಪ್ರಶ್ನೆಗಳನ್ನು ಕೇಳುವವರಿದ್ದಾರೆ. ಕೇರಳದಲ್ಲಿ ಹಿಂದೊಮ್ಮೆ ಶಾಲೆಯೊಂದರ ಅಸೆಂಬ್ಲಿಯಲ್ಲಿ ರಾಷ್ಟ್ರಗೀತೆ ಹಾಡಲು ನಿರಾಕರಿಸಿದ ಮೂವರು ಮಕ್ಕಳನ್ನು ಅಮಾನತು ಮಾಡಲಾಗಿತ್ತು. ಪ್ರಕರಣ ಕೋರ್ಟ್ ಮೆಟ್ಟಿಲೇರಿತು. ‘ರಾಷ್ಟ್ರಗೀತೆ ಹಾಡುವುದು ಜೆಸುವೆಟ್ಸ್ ಧರ್ಮದ ನಂಬಿಕೆಗಳಿಗೆ ವಿರುದ್ಧ’ ಎಂದು ಆ ಮಕ್ಕಳ ಪರ ವಕೀಲರು ಸುಪ್ರೀಂಕೋರ್ಟಿನಲ್ಲಿ ವಾದಿಸಿದ್ದರು. ಆಗ ಇದೇ ಸುಪ್ರೀಂಕೋರ್ಟ್ ‘ಯಾರನ್ನೂ ರಾಷ್ಟ್ರಗೀತೆ ಹಾಡುವಂತೆ ಕಡ್ಡಾಯ ಮಾಡಲಾಗದು’ ಎಂದು ತೀರ್ಪು ನೀಡಿತ್ತು. ಒಟ್ಟಾರೆ ಗೊಂದಲ ಹೆಚ್ಚಿದಂತಾಗಿದೆ.

■ ಬಿ.ಎಂ.ಹನೀಫ್

ರಾಷ್ಟ್ರಗೀತೆಯನ್ನು ಎಲ್ಲರೂ ಗೌರವಿಸಬೇಕು, ರಾಷ್ಟ್ರಧ್ವಜಕ್ಕೂ ಅಗ್ರಗೌರವ ಸಲ್ಲಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜಕ್ಕೆ ಗೌರವ ನೀಡುವುದಕ್ಕೆ ಅದರದ್ದೇ ಆದ ಕ್ರಮಗಳೂ ಇರಬೇಕು ಎನ್ನುವುದನ್ನು ನಾವು ಮರೆಯಬಾರದು.




ಈಶ್ವರ್